**ಸಾಕ್ಷಿಯನ್ನು ದಿಃ 03.09.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಿಪಿ. 9 ರಂತೆ ಮೃತರ ಜನ್ಮ ದಿಃ 07.05.1968 ಇರುತ್ತದೆ ಎಂದರೆ ಸರಿ. ಪಿ.ಎಂ ವರದಿಯಲ್ಲಿ ನನ್ನ ತಂದೆಯ ವಯಸ್ಸು 55 ಎಂದು ಕಾಣಿಸಿರುತ್ತಾರೆ ಎಂದರೆ ಸರಿ. ಅರ್ಜಿಯಲ್ಲಿ ಮೃತರ ವಯಸ್ಸು 49 ಎಂದು ಕಾಣಿಸಿರುತ್ತೇವೆ ಎಂದರೆ ಅದು ತಪ್ಪಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ವ್ಯಾಪಾರ ಮತ್ತು ಕೃಷಿ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತ ಹೇಗೆ ಆಯಿತು ಎಂದು ನನ್ನ ಮಾವ ಪ್ರಭು ರವರು ತಿಳಿಸಿರುತ್ತಾರೆ. ಸದರಿ ಪ್ರಭು ರವರು ಚಾಲನೆ ಮಾಡುತ್ತಿದ್ದ ಹೊಂಡಾ ಆಕ್ಟೀವಾ ಸ್ಕೂಟರ್ ನಲ್ಲಿ ನನ್ನ ತಂದೆ ಹಿಂಬದಿ ಸವಾರರಾಗಿ ಹೋಗುತ್ತಿದ್ದರು. ಸದರಿ ಸ್ಕೂಟರ್ ನ ಸಂಖ್ಯೆ ಗೊತ್ತಿಲ್ಲ. ಸದರಿ ಸ್ಕೂಟರ್ ಗೆ ಪಲ್ಸರ್ ಬೈಕ್ ಡಿಕ್ಕಿ ಪಡಿಸಿರುತ್ತದೆ ಸದರಿ ಬೈಕ್ ನ ಸಂಖ್ಯೆ ಗೊತ್ತಿಲ್ಲ.

ನಿಪಿ. 8 ರ ಪ್ರಕಾರ ಸದರಿ ಬೈಕ್ ನ ಚಾಲಕನನ್ನು 1 ನೇ ಆರೋಪಿಯಾಗಿ ಕಾಣಿಸಿದ್ದು ಮಾಲೀಕನನ್ನು 2 ನೇ ಆರೋಪಿಯನ್ನಾಗಿ ಕಾಣಿಸಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಸದರಿ ಚಾರ್ಜ್ ಶೀಟ್ ಅನ್ನು ಓದಿ ನೋಡಿ ಸಾಕ್ಷಿ ಹೌದು ಎಂದು ಉತ್ತರಿಸಿರುತ್ತಾರೆ. ನನ್ನ ತಂದೆ ಹೋಗುತ್ತಿದ್ದ ಸ್ಕೂಟರ್ ನ ಚಾಲಕ, ಮಾಲೀಕ ಹಾಗೂ ವಿಮೆದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅಪಘಾತವು ನನ್ನ ಮಾವ ಪ್ರಭು ರವರ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತ ನೋಡಿದವರನ್ನು ವಿಚಾರಣೆ ಮಾಡಿಸಲು ತೊಂದರೆ ಇರುವುದಿಲ್ಲ. ನನ್ನ ತಂದೆಯ ಉತ್ತರಾಧಿಕ್ರಿಯೆಗೆ ಎರಡು ಲಕ್ಷ ಖರ್ಚು ಮಾಡಿದ್ದೇವೆ ಎಂದು ತೋರಿಸಲು ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಇನ್ಸೂರೆಂಟಲ್ ಚಾರ್ಜ್ಸ್ ಎರಡು ಲಕ್ಷ ಖರ್ಚು ಮಾಡಿರುತ್ತೇನೆ ಎಂದು ತೋರಿಸಲು ಆ ಬಗ್ಗೆ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರಕ್ಕಾಗಿ ಉತ್ಪ್ರೇಕ್ಷೆಯ ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಶ್ನಿತ ಬೈಕ್ ಚಾಲಕನಿಗೆ ಅಪಘಾತದ ದಿನ ಚಾಲನ

ಪರವಾನಗಿ ಇಲ್ಲದೇ ಇರುವ ಕಾರಣ ಮತ್ತು ಮಧ್ಯಪಾನ ಮಾಡಿ ಬೈಕ್ ಅನ್ನು ಚಾಲನೆ ಮಾಡುತ್ತಿದ್ದ ಕಾರಣ 2ನೇ ಎದುರುದಾರರು ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಖರ್ಚು ವೆಚ್ಚಗಳ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.